ಶ್ರೀ ಕೆ. ಎಚ್. ಪಾಟೀಲ್ :—ಅಗ್ರಿಮೆಂಟ್ ಮೊರಿ ಕಾಡು ನಾಶ ಮಾಡುವ ಕೃತಿ ಮಾಡಿದರೆ ದೇಶಕ್ಕೆ ಆಘಾತವಾಗುತ್ತದೆ. ಆದ್ದರಿಂದ ಆ ರೀತಿ ಮಾಡಿದರೆ ಆ ಬಗ್ಗೆ ಕ್ರಮ ತೆಗೆದುಕೊಳ್ಳುತ್ತೇವೆ.

ಶ್ರೀ ಕಾಗೋಡು ತಿಮ್ಮಪ್ಪ :—ಸಣ್ಣಪುಟ್ಟ ಕೈಗಾರಿಕೆಗಳವರು ನೀಲಗಿರಿ ಮರಗಳನ್ನು ಕೇಳಿದರೆ ಅವರಿಗೆ ಅದನ್ನು ಕೊಡುವುದಕ್ಕೆ ಸರ್ಕಾರದವರು ಆಲೋಚನೆ ಮಾಡುತ್ತೀರಾ ?

ಶ್ರೀ ಕೆ. ಎಚ್. ಪಾಟೀಲ್ :—ಉಳಿದದ್ದು ಇದ್ದರೆ ಆಲೋಚನೆ ಮಾಡುತ್ತೇವೆ.

ಶ್ರೀ ಎನ್. ಎಸ್. ಗುರುಸಿದ್ದಪ್ಪ :—ಹಿಂದೆ ಆದಂತಹ ಅಗ್ರಿಮೆಂಟ್ ಕ್ಯಾನ್ಸಲ್ ಮಾಡಿ ರೇಟನ್ನು ಜಾಸ್ತಿ ಮಾಡುವುದಿಲ್ಲವೇ ?

ಶ್ರೀ ಕೆ. ಎಚ್. ಪಾಟೀಲ್ :—ಅಗ್ರಿಮೆಂಟ್ ಕ್ಯಾನ್ಸಲ್ ಮಾಡುವುದಕ್ಕೆ ಗ್ರೌಂಡ್ ಬೇಕು. ಆಗ್ರಿಮೆಂಟ್ ಮೊರಿ ಅವರು ಏನಾದರೂ ನಡೆದುಥ ಗ್ರೌಂಡ್ ಸಿಕ್ಕಿದರೆ ಅಗ್ರಿಮೆಂಟ್ ಕ್ಯಾನ್ಸಲ್ ಮಾಡುವ ಬಗ್ಗೆ ಆಲೋಚನೆ ಮಾಡುತ್ತೇನೆ.

ಅಧ್ಯಕ್ಷರು.—ಪ್ರಶ್ನೆ ನಂ. 185 ಶ್ರೀ ಕಬಾಡಿ ಅವರ ಪರವಾಗಿ ಶ್ರೀ ಹನುಮೇಗೌಡರು ಕೇಳಬಹುದು.

BHANDARA ON KRISHNA RIVER NEAR GALAGALI VILLAGE

SRI K. H. HANUME GOWDA.—(HASSAN) On behalf of

185. SRI J. L. KABADE.—(Ballolli)

Will the Minister for Public Works and Electricity be pleased to state :—

(*a*) whether construction of a Bhandara on Krishna river near Galagali village in Bilagi taluk has been sanctioned ;

(*b*) if so, the estimated cost of the same ;

(SRI K. H. HANUME GOWDA)

(c) whether the Bhandara at Galagali on Krishna river is constructed to benefit the agricultural farm belonging to an influential individual and landlords having large extent of lands;

(*d*) if so, the names of the landlords who are benefiting from this Bhandara in detail with the extent of land acrewise;

(*e*) whether the area coming under this Bhandara will be submerged after the completion of Upper Krishna Project;

(*f*) whether all formalities required for sanction of work were followed in sanctioning this scheme?

SRI S. B. NAGARAL.—(Minister of State) on behelf of SRI H. M. CHANNABASAPPA.– (Minister for Public Works and Electricity).

(*a*) Yes

(*b*) Rs. 17,24,500

(*c*) *No*

‡(*d*) The details *vide* Statement placed on the Table of the House.

(*e*) Yes

(*f*) Yes

ಶ್ರೀ ಕೆ. ಹೆಚ್. ಹನುಮೇಗೌಡ.— ಈ ಪ್ರಶ್ನೆಯಲ್ಲಿ ಕೃಷ್ಣಾ ಮೇಲ್ದಂಡೆಯ ಯೋಜನೆಯು ಪೂರ್ತಿಗೊಂಡ ನಂತರ ಈ ಬಾಂದಾರದಿಂದ ಪ್ರಯೋಜನ ಹೊಂದುವ ಪ್ರದೇಶಗಳು ಯಾವುಗವೆಯಾಗುವುದೇ ಎಂದು ಕೇಳಿದಕ್ಕೆ ಹಾದು

*Copy placed in the Mysore Legislative Library *vide* No. 2 dated 27-2-71.

ಎಂದು ಉತ್ತರವನ್ನು ಕೊಟ್ಟಿದ್ದೀರಿ, ರೈತನಿಗೆ ಸಹಾಯವಾಗುವಂತಹ ಕೆಲಸವನ್ನು ಮಾಡಿಕೊಡಿ ಎಂದರೆ ಎಕಾನಮಿ ಮೆಜರ್ಸ್ ಎಂದು ಹೇಳುತ್ತೀರಿ, ಈಗ ಕೃಷ್ಣಾ ಮೇಲ್ದಂಡೆಯ ಯೋಜನೆ ಪೂರ್ತಿಗೊಂಡ ನಂತರ ಈ ಬಾಂದಾರದಿಂದ ಪ್ರಯೋಜನ ಹೊಂದುವ ಪ್ರದೇಶಗಳು ಮುಳುಗೆಡೆಯಾಗುತ್ತದೆ ಎಂದು ತಿಳಿದೂ ಈ ಕೆಲಸವನ್ನು ಮಾಡುವುದಕ್ಕೆ ರಾಜಕೀಯ ಪ್ರಭಾವಕ್ಕೆ ಒಳಗಾಗಿ ಏನಾದರೂ ಮಾಡಿದ್ದಾರಾ, ಅಥವಾ ರೈತರ ಹಿತದೃಷ್ಟಿಯಿಂದ ಇದನ್ನು ಮಾಡಿದ್ದೀರಾ ?

†ಶ್ರೀ ಎಸ್.ಬಿ. ನಾಗರಾಳ್.—ಇದನ್ನು ಯಾವುದೇ ರಾಜಕೀಯ ಪ್ರಭಾವಕ್ಕೆ ಒಳಗಾಗಿ ಮಾಡಿಲ್ಲ. ಕೃಷ್ಣಾ ನದಿಯ ನೀರಿನಿಂದ ಕೆಲವು ಜನಗಳಿಗೆ ಸದುಪಯೋಗವಾಗುವ ದೃಷ್ಟಿಯಿಂದ ಇದನ್ನು ಮಾಡಿದ್ದೇವೆ.

ಶ್ರೀ ಕೆ. ಹೆಚ್. ಹನುಮೇಗೌಡ.—ಈ ಯೋಜನೆಯನ್ನು ತಯಾರು ಮಾಡಿ ಕೆಲಸವನ್ನು ಶುರು ಮಾಡುವಾಗ ಕೃಷ್ಣಾ ಮೇಲ್ದಂಡೆಯ ಯೋಜನೆಯನ್ನು ಕಾರ್ಯಗತ ಮಾಡುತ್ತೇವೆ ಎನ್ನುವ ಅಭಿಪ್ರಾಯ ಸರ್ಕಾರಕ್ಕೆ ಇರಲಿಲ್ಲವೇ ?

ಶ್ರೀ ಎಸ್. ಬಿ. ನಾಗರಾಳ್.—ಹೋದವರ್ಷ ಕೃಷ್ಣಾ ಮೇಲ್ದಂಡೆಯ ಯೋಜನೆಯ ಪ್ರದೇಶದಲ್ಲಿ ಇರತಕ್ಕ ಜನಗಳಿಗೆ ಕುಡಿಯುವ ನೀರೇ ಇರಲಿಲ್ಲ. ಆದ್ದರಿಂದ ಅವರಿಗೆ ಕುಡಿಯುವ ನೀರನ್ನು ಒದಗಿಸಲು ಕೊಯಿನಾ ಪ್ರಾಜೆಕ್ಟಿನಿಂದ ಕೃಷ್ಣಾ ನದಿಗೆ ನೀರನ್ನು ಬಿಡಿಸಿ ಅವರಿಗೆ ಕುಡಿಯುವ ನೀರನ್ನು ಒದಗಿಸಲಾಯಿತು. ಆದ್ದರಿಂದ ಈ ಕೃಷ್ಣಾ ನದಿಯ ಬಾಂಧಾರ ಯೋಜನೆಯನ್ನು ಕೈಗೊಂಡರೆ ಸುಮಾರು 200 ಜನಗಳಿಗೆ ಲಫ್ಟ್ ಇರಿಗೇಷನ್ನಿಗೆ ಉಪಯೋಗವಾಗುತ್ತದೆ ಎನ್ನುವ ದೃಷ್ಟಿಯಿಂದ ಈ ಯೋಜನೆಯನ್ನು ಕೈಗೊಳ್ಳಲಾಯಿತು.

RESERVATION OF 18 PER CENT OF POSTS FOR S.C. / S.T. BY STATE PUBLIC UNDERTAKINGS

207. SRI K. SIDDAIAH (Santhemarahally).—

Will the Minister for Industries and Parliamentary Affairs be pleased to state :—

(*a*) whether Government is aware of the cases of local appointments made by the Public Undertakings (State Government Undertakings) in the State ;

(*b*) if so, the steps taken by the Government to ensure that these undertakings maintain 18 per cent reserve